ದಿನಾಂಕಃ **01-08-2025** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಶ್ರೀ ಎಸ್.ಪಿ.ಸಿ., ಆರೋಪಿ ಪರ ವಕೀಲರಿಂದಃ

**3.** ನಾನು ಈ ಪ್ರಕರಣದಲ್ಲಿ ಒಟ್ಟು ಮೋಕ್ತಿಯಾರನಾಮೆದಾರನಾಗಿರುತ್ತೇನೆ ಎಂದರೆ ಸರಿ. ನಿಪಿ-1 ನೋಟರಿ ಪ್ರತಿಯಾಗಿರುತ್ತದೆ ಎಂದರೆ ಸರಿ. ನಿಪಿ-1 ರ ಮೂಲ ಪ್ರತಿಯನ್ನು ಹಾಜರು ಪಡಿಸಲು ನನಗೆ ತೊಂದರೆ ಇಲ್ಲ ಎಂದರೆ ಸರಿ. ಅದರ ಮೂಲ ಪ್ರತಿಯನ್ನು ಹಾಜರು ಪಡಿಸುತ್ತೇನೆ. 2015 ರಲ್ಲಿ ಆರೋಪಿಯು ನಮ್ಮ ಸಂಸ್ಥೆಯಿಂದ ಜಾಮೀನು ಸಾಲ ಪಡೆದುಕೊಂಡಿರುತ್ತಾರೆ. ನಮ್ಮ ಸಂಸ್ಥೆಯವರು ಆರೋಪಿಗೆ ಹಿರೇಕೆರೂರ ಸಂಸ್ಥೆಯಿಂದ ಸಾಲ ಕೊಟ್ಟಿರುತ್ತೇವೆ ಎಂದರೆ ಸರಿ. ಹಿರೇಕೆರೂರ ಶಾಖೆಯು ಯಾವ ಇಸ್ವಿಯಲ್ಲಿ ಬಂದ್ ಆಗಿರುತ್ತದೆ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಅದು ಬಂದ್ ಆಗಿಲ್ಲ ಈಗಲೂ ನಡೆಯುತ್ತಿದೆ ಎಂದು ನುಡಿಯುತ್ತಾರೆ. ಸದ್ರಿ ಸಂಸ್ಥೆಯಲ್ಲಿ ಸಂಬಂಧಪಟ್ಟ ಅಧಿಕಾರಿಗಳಿದ್ದು ದೈನಂದಿನ ವ್ಯವಹಾರ ನಡೆಯುತ್ತದೆ ಎಂದರೆ ಸರಿ.

**4.** ಆರೋಪಿಗೆ ಹಿರೇಕೆರೂರ ಶಾಖೆಯಿಂದ ಸಾಲ ಕೊಟ್ಟಾಗ ಆತನ ಪಿಗ್ಮಿ ಖಾತೆ ಸದ್ರಿ ಶಾಖೆಯಲ್ಲಿ ಇತ್ತು ಎಂದರೆ ಸರಿ. ಆ ಸಮಯದಲ್ಲಿ ಆತನ ಪಿಗ್ಮಿ ಖಾತೆಯಲ್ಲಿ ಎಷ್ಟು ಹಣ ಜಮಾ ಆಗಿತ್ತು ಎಂದು ಗೊತ್ತಿಲ್ಲ. ಆರೋಪಿಯ ಪಿಗ್ಮಿ ಖಾತೆಗೆ ಸಂಬಂಧಪಟ್ಟ ದಾಖಲೆಗಳು ಹಿರೇಕೆರೂರ ಶಾಖೆಯಲ್ಲಿ ಇರುತ್ತದೆ ಎಂದರೆ ಸರಿ. ಅದೇ ರೀತಿ ಆತನಿಗೆ ಸಂಬಂಧಿಸಿದ ಸಾಲದ ದಾಖಲೆಗಳು ಹಿರೇಕೆರೂರ ಶಾಖೆಯಲ್ಲಿ ಇರುತ್ತದೆ ಎಂದರೆ ಸಾಕ್ಷಿಯು ಇಲ್ಲಾ, ಹಾವೇರಿಯ ಕೇಂದ್ರ ಕಛೇರಿಯಲ್ಲಿ ಇರುತ್ತದೆ ಎಂದು ನುಡಿಯುತ್ತಾರೆ. ಆರೋಪಿಗೆ ಸಾಲ ಮಂಜೂರು ಮಾಡುವ ಸಮಯದಲ್ಲಿ ಆತನಿಗೆ ಸಂಬಂಧಪಟ್ಟ ಎಲ್ಲಾ ದಾಖಲೆಗಳನ್ನು ಹಿರೇಕೆರೂರ ಶಾಖೆಯಲ್ಲಿ ಪಡೆದುಕೊಂಡಿರುತ್ತೇವೆ ಎಂದರೆ ಸರಿ. ಈ ಪ್ರಕರಣದಲ್ಲಿ ಆರೋಪಿಗೆ ಸಂಬಂಧಪಟ್ಟ ಲೋನ್ ದಾಖಲೆಗಳನ್ನಾಗಲೀ, ಆತನಿಂದ ಪಡೆದುಕೊಂಡ ದಾಖಲೆಗಳನ್ನಾಗಲೀ, ಅಕೌಂಟ ಸ್ಟೇಟ್‌ಮೆಂಟ್‌ನ್ನಾಗಲೀ ನ್ಯಾಯಾಲಯಕ್ಕೆ ಹಾಜರು

ಮಾಡಿಲ್ಲ ಎಂದರೆ ಸಾಕ್ಷಿಯು ಅಕೌಂಟ ಸ್ಟೇಟ್‌ಮೆಂಟ್‌ನ್ನು ಹಾಜರು ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ಆರೋಪಿಗೆ ಸಾಲ ಮಂಜೂರು ಮಾಡುವ ಸಮಯದಲ್ಲಿ ಆರೋಪಿ ನೀಡಿರುವ ಸಾಲದ ಅರ್ಜಿ, ನಮ್ಮ ಸಂಸ್ಥೆಯವರು ಆತನಿಗೆ ಸಾಲ ನೀಡಲು ಮಾಡಿದಂತಹ ಠರಾವು, ಸಾಲದ ಹಣವನ್ನು ಆರೋಪಿಗೆ ನೀಡಿರುವ ಬಗ್ಗೆ ಮಾಹಿತಿ ಪತ್ರವನ್ನು ನ್ಯಾಯಾಲಯಕ್ಕೆ ಹಾಜರು ಮಾಡಿಲ್ಲ. ಸದ್ರಿ ದಾಖಲೆಗಳನ್ನು ಹಾಜರು ಪಡಿಸಲು ನನಗೆ ತೊಂದರೆ ಇಲ್ಲಾ ಎಂದರೆ ಸರಿ, ಹಾಜರು ಮಾಡುತ್ತೇನೆ.

**5.** ನಮ್ಮ ಸಂಸ್ಥೆಯು ಸೌಹಾರ್ದ ಕಾಯ್ದೆಯಡಿಯಲ್ಲಿ ನೋಂದಾವಣಿಯಾದ ಸಂಸ್ಥೆ ಎಂದರೆ ಸರಿ. ಸೌಹಾರ್ದ ಕಾಯ್ದೆಯ ಪ್ರಕಾರ ನಾವು ಯಾವುದೇ ಸಾಲಗಾರರಿಂದ ಪಿಗ್ಮಿ ಹಣವನ್ನು ಸಂಗ್ರಹ ಮಾಡುವಂತಿಲ್ಲ ಎಂದರೆ ಸಾಕ್ಷಿಯು ಮಾಡಬಹುದು ಎಂದು ನುಡಿಯುತ್ತಾರೆ. ನಾವು ಸಾಲಗಾರರಿಂದ ಪಿಗ್ಮಿ ಹಣವನ್ನು ಸಂಗ್ರಹ ಮಾಡಬೇಕೋ ಅಥವಾ ಬೇಡವೋ ಎನ್ನುವುದರ ಬಗ್ಗೆ ಬೈಲಾನಲ್ಲಿ ನಮೂದು ಇರುತ್ತದೆ. ಸದ್ರಿ ಬೈಲಾವನ್ನು ಹಾಜರು ಪಡಿಸುತ್ತೇನೆ.

**6.** 2015 ರಲ್ಲಿ ಕೊಟ್ಟಂತಹ ಸಾಲದ ಅವಧಿ 02 ವರ್ಷ, ಅದು 2017 ಕ್ಕೆ ಮುಗಿಯುತ್ತದೆ ಎಂದರೆ ಸರಿ. ಸದ್ರಿ ಸಾಲದ ಅವಧಿ ಮುಗಿದ ಸಮಯದಲ್ಲಿ ನಮ್ಮ ಸಂಸ್ಥೆಯಿಂದ ಆರೋಪಿಗೆ ನೋಟಿಸ್ ಕೊಟ್ಟಿರುತ್ತೀರಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸಾಲದ ಪ್ರತಿ ತಿಂಗಳ ಕಂತಿನ ಹಣ ರೂ. 5,556/- ಎಂದರೆ ಸರಿ. ನಮ್ಮ ಸಂಸ್ಥೆಯ ಬಡ್ಡಿ 23.20% ಇರುತ್ತದೆ ಎಂದರೆ ಸರಿ. 2017 ರಲ್ಲಿ ಸಾಲ ಅವಧಿ ಮುಗಿದ ನಂತರ ಆರೋಪಿ ಖಾತೆಯಲ್ಲಿ ಎಷ್ಟು ಹಣ ಸಾಲಕ್ಕೆ ಜಮಾ ಆಗಿರುತ್ತದೆ ಎನ್ನುವ ಬಗ್ಗೆ ಹೇಳಲಾಗುವುದಿಲ್ಲ. ಸಾಕ್ಷಿಯು ಮುಂದುವರೆದು ಸ್ಟೇಟ್‌ಮೆಂಟ್ ನೋಡಬೇಕಾಗುತ್ತದೆ ಎಂದು ನುಡಿಯುತ್ತಾರೆ. ನಿಪಿ-7- ಆರೋಪಿಯ ಖಾತೆಯಲ್ಲಿ 2017 ಕ್ಕೆ ಸಾಲದ ಅವಧಿ ಮುಗಿದಾಗ ಎಷ್ಟು ಸಾಲದ ಹಣ ಜಮಾ ಆಗಿರುತ್ತದೆ ಎನ್ನುವ ಬಗ್ಗೆ ನಮೂದು ಇದೆಯೇ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ನಮೂದು ಇದೆ ಆದರೆ ಎಷ್ಟು ಇದೆ ಎಂದು ಲೆಕ್ಕಾಚಾರ ಹಾಕಬೇಕಾಗುತ್ತದೆ ಎಂದು ನುಡಿಯುತ್ತಾರೆ.

ಪಿಡಬ್ಲ್ಯೂ-1

**7.** 2017 ಕ್ಕೆ ಆರೋಪಿಯು ರೂ.93,356/-ಗಳನ್ನು ತುಂಬಿರುತ್ತಾರೆ ಎಂದರೆ ಸಾಕ್ಷಿಯು ಸ್ಟೇಟ್‌ಮೆಂಟ್ ನೋಡಿ ಹೇಳಬೇಕಾಗುತ್ತದೆ ಎಂದು ನುಡಿಯುತ್ತಾರೆ. ನಿಪಿ-7 ಸ್ಟೇಟ್‌ಮೆಂಟ್ ಹೌದು. ನಮ್ಮ ಸಂಸ್ಥೆಯಲ್ಲಿ ಜಾಮೀನು ಸಾಲ ನೀಡುವಾಗ ಒಬ್ಬರು ಅಥವಾ ಇಬ್ಬರಿಂದ ಜಾಮೀನು ಪಡೆದುಕೊಳ್ಳುತ್ತೇವೆ ಎಂದರೆ ಸರಿ. ಜಾಮೀನುದಾರರಿಂದ ಎಲ್ಲ ದಾಖಲೆಗಳನ್ನು ಪಡೆದುಕೊಳ್ಳುತ್ತೇವೆ ಎಂದರೆ ಸರಿ. ಅದೇ ರೀತಿ ಸಾಲಗಾರರಿಂದ ಎಲ್ಲ ದಾಖಲೆಗಳನ್ನು ಪಡೆದುಕೊಂಡಿರುತ್ತೇವೆ ಎಂದರೆ ಸರಿ. ಆ ಸಮಯದಲ್ಲಿ ಸಾಲಗಾರರಿಂದ ಆಧಾರ ಕಾರ್ಡ, ಪಾನ ಕಾರ್ಡ, ಪಡಿತರ ಚೀಟಿ, 2 ಅಥವಾ 3 ಖಾಲಿ ಚೆಕ್, ರೂ. 200/- ಗಳ ಬಾಂಡ್ ಪೇಪರ ಪಡೆಯುತ್ತೇವೆ ಎಂದರೆ ಸಾಕ್ಷಿಯು ಆಧಾರ ಕಾರ್ಡ, ಮತದಾರರ ಗುರುತಿನ ಚೀಟಿ ಮತ್ತು ಪಡಿತರ ಚೀಟಿ ಇವುಗಳನ್ನು ಪಡೆದಿರುತ್ತೇವೆ ಎಂದು ನುಡಿಯುತ್ತಾರೆ. ನಾವು ಸಾಲವನ್ನು ನೀಡುವಾಗ ಸಾಲಗಾರರಿಂದ ಖಾಲಿ ಚೆಕ್‌ಗಳು ಮತ್ತು ಬಾಂಡ್ ಪೇಪರನ್ನು ಪಡೆಯುತ್ತೇವೆ, ಆದರೂ ಸಹ ಪಡೆಯುತ್ತೇವೆ ಎಂದು ಹೇಳಿದರೆ ಈ ಪ್ರಕರಣಕ್ಕೆ ವಿರುದ್ಧವಾಗುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**8.** ಸಾಲದ ಅವಧಿ 2017 ಕ್ಕೆ ಮುಗಿದ ನಂತರ ಈ ಪ್ರಕರಣವನ್ನು ದಾಖಲಿಸುವವರೆಗೆ ಅಂದರೆ 2019 ರವರೆಗೆ ಆ ಅವಧಿಯಲ್ಲಿ ಆರೋಪಿಗೆ ಸಾಲದ ಹಣ ಇಂತಿಷ್ಟು ಬಾಕಿ ಇದೆ ಎಂದು ನೋಟಿಸನ್ನು ಕೊಟ್ಟಿರುತ್ತೀರಾ ಎಂದರೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ಎಷ್ಟು ನೋಟಿಸ ಕೊಟ್ಟಿರುತ್ತೇವೆ ಎಂದು ಹೇಳಲು ಆಗುವುದಿಲ್ಲ. ಸದ್ರಿ ನೋಟಿಸನ್ನು ಈ ಪ್ರಕರಣದಲ್ಲಿ ಹಾಜರು ಮಾಡಿಲ್ಲ ಎಂದರೆ ಸರಿ. ಅದನ್ನು ಹಾಜರು ಪಡಿಸಲು ನನಗೆ ತೊಂದರೆ ಇಲ್ಲಾ ಎಂದರೆ ಸಾಕ್ಷಿಯು ಹಾಜರು ಪಡಿಸಲು ಆಗುವುದಿಲ್ಲ ಎಂದು ನುಡಿಯುತ್ತಾರೆ. ಯಾವ ಕಾರಣಕ್ಕೆ ಹಾಜರುಪಡಿಸಲು ಆಗುವುದಿಲ್ಲ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಸದ್ರಿ ನೋಟಿಸನ ಪ್ರತಿ ಕಛೇರಿಯಲ್ಲಿ ಇದೆಯೋ ಇಲ್ಲವೋ ಎಂದು ನೋಡಿ ಹಾಜರು ಪಡಿಸುತ್ತೇನೆ ಎಂದು ನುಡಿಯುತ್ತಾರೆ. ಆರೋಪಿಗೆ ಯಾವುದೇ ನೋಟಿಸನ್ನು ಕೊಟ್ಟಿಲ್ಲ,

ಆದ್ದರಿಂದಲೇ ಹಾಜರು ಪಡಿಸಲು ಆಗುವುದಿಲ್ಲ ಎಂದು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**9.** ಆರೋಪಿಗೆ ಕನ್ನಡ ಓದಲು ಬರೆಯಲು ಬಿಟ್ಟು ಇತರೆ ಭಾಷೆ ಬರುವುದಿಲ್ಲ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಿಪಿ-2 ರಲ್ಲಿರುವ ಮೊತ್ತವನ್ನು ಬರೆದಿರುವ ಬರವಣಿಗೆ ಇಂಗ್ಲೀಷ್‌ನಲ್ಲಿ ಇದೆ ಎಂದರೆ ಸರಿ. ನಿಪಿ-4 ರಂತೆ ಆರೋಪಿಗೆ ಕಳುಹಿಸಿದ ನೋಟಿಸ್ ಆತನಿಗೆ ತಲುಪಿರುವುದಿಲ್ಲ ಎಂದರೆ ಸಾಕ್ಷಿಯು ಗೊತ್ತಿಲ್ಲ ಎಂದು ನುಡಿಯುತ್ತಾರೆ. ಆರೋಪಿತನಿಂದ ಸಂಗ್ರಹಿಸಿದ್ದ ಪಿಗ್ಮಿ ಹಣವನ್ನು ಸಾಲಕ್ಕೆ ಹೊಂದಾಣಿಕೆ ಮಾಡಿಕೊಂಡಿರುತ್ತೇವೆ. ಸದ್ರಿ ಪಿಗ್ಮಿ ಹಣವನ್ನು ಆರೋಪಿಯ ಸಾಲದ ಖಾತೆಗೆ ಜಮಾ ಮಾಡಿದ ಬಗ್ಗೆ ನಿಪಿ-7 ರಲ್ಲಿ ನಮೂದು ಮಾಡಿಲ್ಲ ಎಂದರೆ ಸಾಕ್ಷಿಯು ದಿನಾಂಕಃ 30-01-2018 ರಂದು ರೂ.8,800/- ಗಳು ಜಮಾ ಆಗಿರುತ್ತದೆ ಎಂದು ನಮೂದು ಇದೆ ಎಂದು ನುಡಿಯುತ್ತಾರೆ. ನಂತರ ದಿನಾಂಕಃ 31-03-2018 ರಂದು ರೂ.5,550/-, ದಿನಾಂಕಃ 07-05-2018 ರಂದು ರೂ. 2,240/-, ದಿನಾಂಕಃ 04-06-2018 ರಂದು ರೂ. 2,410/-, ದಿನಾಂಕಃ 01-10-2018 ರಂದು ರೂ.9,500/-, ದಿನಾಂಕಃ 5-12-2018 ರಂದು ರೂ. 2,550/-, ದಿನಾಂಕಃ 31-01-2019 ರಂದು ರೂ.2,600/-, ದಿನಾಂಕಃ 28-02-2019 ರಂದು ರೂ. 3,550/-, ದಿನಾಂಕಃ 31-03-2019 ರೂ.1,400/-ಗಳನ್ನು ಆರೋಪಿಯ ಪಿಗ್ಮಿ ಖಾತೆಯಿಂದ ಸಾಲದ ಖಾತೆಗೆ ಜಮಾ ಮಾಡಿಕೊಂಡಿರುತ್ತೇವೆ ಎಂದು ನಿಪಿ-7 ರಲ್ಲಿ ನಮೂದು ಇರುತ್ತದೆ. ಪಿಗ್ಮಿ ಖಾತೆಯಲ್ಲಿರುವ ಹಣವನ್ನು ಸಾಲದ ಖಾತೆಗೆ ಜಮೆ ಮಾಡಿಕೊಳ್ಳಲು ಬರುವುದಿಲ್ಲ ಎಂದರೆ ಸರಿಯಲ್ಲ. ಈ ಬಗ್ಗೆ ನಮ್ಮ ಸಂಸ್ಥೆಯ ಬೈಲಾದಲ್ಲಿ ನಮೂದು ಇದೆ. ಯಾವುದೇ ಗ್ರಾಹಕರ ಪಿಗ್ಮಿ ಖಾತೆಯಿಂದ ಹಣವನ್ನು 6 ತಿಂಗಳಿಗೆ, 9 ತಿಂಗಳಿಗೆ ಮತ್ತು 01 ವರ್ಷಕ್ಕೆ ಮಾತ್ರ ಹಣವನ್ನು ವಿತ್ ಡ್ರಾ ಮಾಡಿಕೊಳ್ಳಬಹುದು ಎಂದರೆ ಸಾಕ್ಷಿಯು ಸಾಲದ ಖಾತೆಗೆ ಜಮಾ ಮಾಡಿಕೊಳ್ಳಬಹುದು ಎಂದು ನುಡಿಯುತ್ತಾರೆ. ಸಾಲಗಾರರ ಪಿಗ್ಮಿ ಖಾತೆಯಿಂದ ಸಾಲದ ಹಣವನ್ನು ಜಮಾ ಮಾಡಿಕೊಳ್ಳುತ್ತೇವೆ ಎಂದು ಸಾಲದ ಒಪ್ಪಂದ ಪತ್ರದಲ್ಲಿ ನಮೂದು ಮಾಡಿರುತ್ತೇವೆ. ಸದ್ರಿ ಸಾಲದ ಒಪ್ಪಂದ ಪತ್ರವನ್ನು

ಈ ಪ್ರಕರಣದಲ್ಲಿ ಹಾಜರು ಮಾಡಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಹಾಜರು ಪಡಿಸುತ್ತೇನೆ ಎಂದು ನುಡಿಯುತ್ತಾರೆ.

**10.** ಪಿಗ್ಮಿ ತುಂಬಿದವರಿಗೆ ಎಷ್ಟು ಬಡ್ಡಿ ಹಣ ನಿಮ್ಮ ಸಂಸ್ಥೆಯಿಂದ ನೀಡುತ್ತೀರಿ ಎಂದರೆ ಸಾಕ್ಷಿಯು ಸರಾಸರಿ ಶೇಕಡಾ 6 ರಷ್ಟು ಬಡ್ಡಿ ಹಣ ಕೊಡುತ್ತೇವೆ ಎಂದು ನುಡಿಯುತ್ತಾರೆ. ನಮ್ಮ ಸಂಸ್ಥೆಯಲ್ಲಿ ಪಿಗ್ಮಿ ಖಾತೆಯನ್ನು 06 ತಿಂಗಳಿಗೆ ಮುಕ್ತಾಯ ಮಾಡುತ್ತೇವೆ. ಆರೋಪಿ ಎಷ್ಟು ತಿಂಗಳಿಗೆ ಪಿಗ್ಮಿ ಹಣ ಜಮಾ ಮಾಡಿದ್ದ, ಎಷ್ಟು ಅವಧಿಯವರೆಗೆ ಜಮಾ ಮಾಡಿದ್ದ ಎನ್ನುವ ಬಗ್ಗೆ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರು ಮಾಡಿಲ್ಲ ಎಂದರೆ ಸರಿ. ಸದ್ರಿ ದಾಖಲೆಯನ್ನು ಹಾಜರು ಪಡಿಸುತ್ತೇನೆ. ಆರೋಪಿಯ ವಿರುದ್ಧ ಈ ಪ್ರಕರಣವನ್ನು ಹೊರತುಪಡಿಸಿ ಬೆಳಗಾವಿಯಲ್ಲಿ Arbitration ಪ್ರಕರಣ ದಾಖಲು ಮಾಡಿರುತ್ತೇವೆ ಎಂದರೆ ಸರಿಯಲ್ಲ. ದಿನಾಂಕಃ 05-04-2019 ರಂದು ಚೆಕ್‌ನ್ನು ಎಕ್ಸಿಸ್ ಬ್ಯಾಂಕಗೆ ಹಾಜರು ಪಡಿಸಿರುತ್ತೇನೆ.

**11.** ನಿಪಿ-2 ರ ಚೆಕ್ ಆರೋಪಿಗೆ ಸಾಲವನ್ನು ಮಂಜೂರು ಮಾಡುವ ಸಮಯದಲ್ಲಿ 2015 ರಲ್ಲಿ ಸಾಲದ ಭದ್ರತೆಗಾಗಿ ಪಡೆದಂತಹ ಖಾಲಿ ಚೆಕ್ ಆಗಿರುತ್ತದೆ ಎಂದರೆ ಸರಿಯಲ್ಲ. ಆರೋಪಿಯು ನಾನು ಹೇಳಿರುವಂತೆ ಯಾವುದೇ ಚೆಕ್‌ನ್ನು ಹಣದ ಮರುಪಾವತಿಗಾಗಿ ಕೊಟ್ಟಿಲ್ಲ, ಆರೋಪಿಯು ರೂ. 94,242/- ಗಳನ್ನುಪಾವತಿ ಮಾಡಲು ಬಾಕಿ ಇರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಯಿಂದ 2015 ರಲ್ಲಿ ಸಾಲ ಮಂಜೂರು ಮಾಡುವ ಸಮಯದಲ್ಲಿ ಪಡೆದುಕೊಂಡ ಚೆಕ್‌ನ್ನು 2019 ರಲ್ಲಿ ದುರುಪಯೋಗ ಪಡಿಸಿಕೊಂಡು ಸುಳ್ಳು ಪ್ರಕರಣವನ್ನು ದಾಖಲು ಮಾಡಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲಾ

**(**ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ**.)**

ಓ ಹೇ ಕೇ ಸರಿ ಇದೆ.

-ಸಹಿ-

ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ. ಹಾವೇರಿ.